**ಸಾಕ್ಷಿಯನ್ನು ದಿಃ21.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ ಹೆಚ್ ವಕೀಲರಿಂದಃ**

ದಾವೆಯನ್ನು ನನ್ನ ತಂದೆ ಹಾಕಿರುತ್ತಾರೆ. ದಾವೆಯನ್ನೂಡಲು ಮಾಹಿತಿಯನ್ನು ನಾನು ಮತ್ತು ನನ್ನ ತಂದೆ ಇಬ್ಬರೂ ಸೇರಿ ನೀಡಿದ್ದೇವೆ. ನನ್ನ ತಂದೆ ಈಗ ಆರೋಗ್ಯವಾಗಿ ಎಲ್ಲಾ ದೈನಂದಿನ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ವಯಸ್ಸಾದ ಕಾರಣ ಅಸ್ವಸ್ಥರಾಗಿರುತ್ತಾರೆ. ನನ್ನ ತಂದೆಯವರಿಗೆ ಕಣ್ಣಿನ ದೃಷ್ಠಿ ಕಡಿಮೆಯಾಗಿರುತ್ತದೆ. ದಾವೆ ಹಾಕಿದ ನಂತರ ನನ್ನ ತಂದೆಯವರು ಮರಳಿ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದರೆ ಮೊದಲು ಬಂದಿರುತ್ತಾರೆ ತದನಂತರ ಬಂದಿರುವುದಿಲ್ಲ.

ದಾವೆಯ ಎಲ್ಲಾ ವಿಚಾರಗಳನ್ನು ತಿಳಿದು ಸಾಕ್ಷ್ಯ ನುಡಿಯಲು ಬಂದಿದ್ದೇನೆ. ನಾನು ಕನ್ನಡ ಮಾಧ್ಯಮದಲ್ಲಿ ಪದವಿ ವ್ಯಾಸಂಗ ಮಾಡಿದ್ದೇನೆ. ಈ ದಾವೆಯನ್ನು ನಾನು 1 ರಿಂದ 5 ನೇ ಪ್ರತಿವಾದಿಗಳ ವಿರುದ್ಧ ಕ್ರಯದ ಕರಾರು ಪತ್ರದ ಆಧಾರದ ಮೇಲೆ ಹಾಕಿದ್ದೇನೆ. 5 ನೇ ಪ್ರತಿವಾದಿ ಅಪ್ರಾಪ್ತ ವಯಸ್ಸಿನವರು ಎಂದರೆ ಸರಿ.

ನಿಪಿ-1 ದಾಖಲೆಯನ್ನು ಶ್ರೀನಿವಾಸಪುರ ಸ್ಟಾಂಪ್ ಮಾರಾಟಗಾರರ ಬಳಿ ತಯಾರಿಸಿದೆ. ನಿಪಿ-1 ನ್ನು 1 ನೇ ಪ್ರತಿವಾದಿಯವರು ಮಾಡಿಸಿರುತ್ತಾರೆ. ನಾನು ಆ ರೀತಿ ನಿಪಿ-1 ನ್ನು ತಯಾರಿಸುವ ಸಮಯದಲ್ಲಿ 1 ನೇ ಪ್ರತಿವಾದಿಯ ಜೊತೆಗೆ ಹೋಗಿರಲಿಲ್ಲ. ಆದರೆ ನಿಪಿ-1 ನ್ನು ತಯಾರಿಸುವ ಸಮಯದಲ್ಲಿ ನಾನು ಹಾಜರಿದ್ದೆ. ನನ್ನನ್ನು 1 ನೇ ಪ್ರತಿವಾದಿಯೇ ಕರೆಸಿದ್ದರು. ನಿಪಿ-1 ದಾಖಲೆಯನ್ನು ದಿಃ06.11.2009 ರಂದು ಮಾಡಿದ್ದೆವು. 1 ನೇ ಪ್ರತಿವಾದಿಯವರು 2 ದಿನಗಳ ಮುಂಚಿತವಾಗಿ ದಿನಾಂಕ ತಿಳಿಸಿ ಬರಲು ಹೇಳಿದ್ದರು. 1 ನೇ ಪ್ರತಿವಾದಿ ನನ್ನ ಅಜ್ಜಿ, ನನ್ನ ತಾತ ಮತ್ತು 1 ನೇ ಪ್ರತಿವಾದಿಯ ಗಂಡ ದಾಯಾದಿಗಳು. ಆ ಸಮಯದಲ್ಲಿ 1 ನೇ ಪ್ರತಿವಾದಿಗೆ ಅಂದಾಜು 70-80 ವಯಸ್ಸಾಗಿತ್ತು. 1 ನೇ ಪ್ರತಿವಾದಿ ವಾಸವಿದ್ದ ಮನೆಯು ನಮ್ಮ ಮನೆಯಿಂದ 10 ಮನೆಗಳು ಬಿಟ್ಟು ಇರುತ್ತದೆ. 1 ನೇ ಪ್ರತಿವಾದಿಯನ್ನು ಅವರ ಮೊಮ್ಮಗಳು ಮುನಿಯಮ್ಮನವರು ಸಾಕುತ್ತಿದ್ದರು. ಸ್ಟಾಂಪ್

ಮಾರಾಟಗಾರರ ಸಮಕ್ಷಮ ಎಲ್ಲಾ ಮಾತುಕತೆಯಾಗಿತ್ತು. ಆ ಸಮಯದಲ್ಲಿ ಅಂದಾಜು 10 ಜನ ಸೇರಿದ್ದರು. ಸದರಿಯವರೆಂದರೆ ಲಕ್ಷ್ಮಮ್ಮ, ಮುನಿಯಮ್ಮ, ರತ್ನಮ್ಮ, ಮುನಿಯಮ್ಮ, ನಾರಾಯಣಪ್ಪ, ವೆಂಕಟರಾಮ ಎನ್, ಆರ್ ಎಂ ಗೋಪಾಲಕೃಷ್ಣ, ಎಂ ನಾರಾಯಣಸ್ವಾಮಿ ಹಾಗೂ ಗೋಪಾಲಕೃಷ್ಣರವರು ಇದ್ದರು. ನಾವು ಹೋದ ನಂತರ 1 ನೇ ಪ್ರತಿವಾದಿಯು ಛಾಪಾ ಕಾಗದ ತಂದು ಪತ್ರ ಬರೆಯಿಸಿದರು. ನಾವು ಹೋದ ಸಮಯದಲ್ಲಿ ಬೆಳಿಗ್ಗೆ 10 ಗಂಟೆಯಾಗಿತ್ತು. ಆ ಸಮಯದಲ್ಲಿ ಈ ಮೇಲೇಳಿದ ಜನರೆಲ್ಲಾ ಹಾಜರಿದ್ದರು. 1 ನೇ ಪ್ರತಿವಾದಿಯವರು 100 ರೂ ಮುಖಬೆಲೆ ಎರಡು ಛಾಪಾ ಕಾಗದಗಳನ್ನು ತಂದಿದ್ದರು. ನಿಪಿ-1 ನ್ನು ತಯಾರಿಸಲು ಮಾಹಿತಿಯನ್ನು 1 ನೇ ಪ್ರತಿವಾದಿ ತಿಳಿಸಿದ್ದು ಪತ್ರಬರಹಗಾರರು ಮುನಿವೆಂಕಟಪ್ಪರವರು ಬರೆದರು. ನಿಪಿ-1 ನ್ನು ಬೆಳಿಗ್ಗೆ 11.00 ಗಂಟೆಗೆ ಕೈಯಿಂದ ಬರೆಯಲಾಗಿತ್ತು. ನಿಪಿ-1 ನ್ನು ಈಗ ನೋಡಲಾಗಿ ಅದು ಕಪ್ಪು ಶಾಯಿಯಲ್ಲಿರುತ್ತದೆ.

1 ನೇ ಪ್ರತಿವಾದಿ ನಿಪಿ-1 ಕ್ಕೆ ತನಗಾಗಿ ಮತ್ತು 5 ನೇ ಪ್ರತಿವಾದಿಯ ಪರವಾಗಿ 2 ಹೆಬ್ಬೆಟ್ಟಿನ ಗುರ್ತನ್ನು ಹಾಕಿದರು. ನಿಪಿ-1 ಕ್ಕೆ ನಾರಾಯಣಸ್ವಾಮಿಯವರು ಮೊದಲನೇ ಸಾಕ್ಷಿದಾರರಾಗಿ ಮತ್ತು ಆರ್ ಎಂ ಗೋಪಾಲಕೃಷ್ಣರವರು ಮತ್ತೊಬ್ಬ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

ದಾವಾ ಆಸ್ತಿಯ ಸರ್ವೇನಂಬರ್ 6/ಪಿ5 ರ 1 ಎಕರೆ 30 ಗುಂಟೆ ಪೈಕಿ ನಮಗೆ 1 ಎಕರೆಯನ್ನು ಮಾರಾಟ ಮಾಡಲು ಒಪ್ಪಿದ್ದರು. ನಮಗೆ ಮಾರಾಟ ಮಾಡಲು ಒಪ್ಪಿದ 1 ಎಕರೆ ಜಮೀನಿನ ಚೆಕ್ಕುಬಂದಿ ಹೇಳಬಲ್ಲೆ ಆದರೆ ಒಟ್ಟು ಜಮೀನಿನ ಚೆಕ್ಕುಬಂದಿ ಹೇಳಲಾಗುವುದಿಲ್ಲ. 1 ನೇ ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂತೆಂದು ನನಗೆ ಗೊತ್ತಿಲ್ಲ. ನಿಪಿ-1 ನ್ನು ತಯಾರಿಸುವಾಗ ದಾವಾ ಆಸ್ತಿಯ ಪಹಣಿಯನ್ನು ನೋಡಿಯೇ ದಾಖಲೆ ಬರೆದಿರುತ್ತಾರೆ. ದಾವಾ ಆಸ್ತಿಯ ಆಗಿನ ಮಾರುಕಟ್ಟೆ ಬೆಲೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಮಾವಿನ ಮರಗಳನ್ನು 1 ನೇ ಪ್ರತಿವಾದಿಯೇ ಬೆಳೆಸಿದ್ದಾರೆ. ಅವರೇ ಅದನ್ನು ಫಸಲು ಪಡೆಯುತ್ತಿದ್ದಾರೆ. 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ.

ನಿಪಿ-1 ಸುಳ್ಳು ದಾಖಲೆಯಾಗಿದ್ದು ಅದನ್ನು ನನ್ನ ತಂದೆ ಮತ್ತು ಇತರರು ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ಪ್ರತಿವಾದಿಗಳು ಬರೆದು ನೀಡಿರುವುದಿಲ್ಲ, ಅದರಲ್ಲಿರುವ

ಹೆಬ್ಬೆಟ್ಟಿನ ಗುರ್ತುಗಳು ಪ್ರತಿವಾದಿಗಳದ್ದಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ನೋಟೀಸು ನೀಡಿದ ಸಮಯದಲ್ಲಿ ನಮ್ಮ ಖಾತೆಯಲ್ಲಿ ಎಷ್ಟು ಹಣ ಇತ್ತೆಂದು ಈಗ ನೆನಪಿಲ್ಲ. 2010ರಲ್ಲಿ ನನ್ನ ತಂದೆಯವರಿಗೆ ಬ್ಯಾಂಕ್ ಖಾತೆ ಇರಲಿಲ್ಲ, ಆದರೆ ನನಗೆ ಬ್ಯಾಂಕ್ ಖಾತೆ ಇತ್ತು. ನನ್ನ ಬಳಿ ಆಧಾಯ ಪ್ರಮಾಣಪತ್ರವಿದೆ. ಅದರಲ್ಲಿ ವರ್ಷಕ್ಕೆ 30-40 ಸಾವಿರ ರೂ ಆಧಾಯದ ಬಗ್ಗೆ ನಮೂದಿರುತ್ತದೆ. ನನ್ನ ತಂದೆಯವರು ಕೂಲಿ ಕೆಲಸ ಮಾಡುತ್ತಾರೆ.

ನಾನು ಹೇಳುವ ಕರಾರು ಪತ್ರದ ಹಾಗೆಯೇ ಆ ದಿನವೇ ಕ್ರಯ ಪತ್ರ ಮಾಡಿಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾಖಲೆಗಳನ್ನು ಒದಿಗಸಲು ಸಮಯಾವಕಾಶ ಕೇಳಿದ್ದರಿಂದ ಕೇವಲ ಕರಾರು ಪತ್ರವನ್ನು ಮಾಡಿಕೊಂಡೆವು. ನಿಪಿ-1 ಸೃಷ್ಠಿಸಿದ ದಾಖಲೆಯಾಗಿದ್ದ ಕಾರಣ ಆ ರೀತಿ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ದಿಃ18.10.2010ರಂದು ಆಗಿರುವ ಕ್ರಯದ ಕರಾರು ಪತ್ರದಲ್ಲಿ 1 ರಿಂದ 4 ಮತ್ತು 9ನೇ ಪ್ರತಿವಾದಿಗಳು ಮಾರಾಟಗಾರರು ಎಂದರೆ ಸರಿ. ನಮಗೆ ಕ್ರಯದ ಕರಾರು ಪತ್ರ ಆದ ನಂತರ ಆ ರೀತಿ ಮತ್ತೊಂದು ಕ್ರಯದ ಕರಾರು ಮಾಡಿದ್ದಾರೆ. ಈಗಾಗಲೇ ದಿಃ18.10.2010ರಲ್ಲಿ ಕ್ರಯದ ಕರಾರು ಆದ ನಂತರ ಹೇಗಾದರೂ ಆಸ್ತಿಯನ್ನು ಕಬಳಿಸಬೇಕೆಂದು ನಿಪಿ-1 ಕ್ರಯದ ಕರಾರುಪತ್ರ ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಮುಂದವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅವರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

(ಕರ್ನ ಸಿಂಗ್ ಆರ್.ಯು)

**C/c ಅಪರ ಸಿವಿಲ್ ನ್ಯಾಯಾಧೀಶರು**

**ಶ್ರೀನಿವಾಸಪುರ**

**ಸಾಕ್ಷಿಯನ್ನು ದಿಃ21.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ ಹೆಚ್ ವಕೀಲರಿಂದಃ**

ದಾವೆಯನ್ನು ವಾದಿಯು ಲಕ್ಷ್ಮಮ್ಮ, ಮುನಿಯಮ್ಮ ಮತ್ತು ವೀಣಾರವರ ವಿರುದ್ಧ ಹಾಕಿರುತ್ತಾರೆ. ವಾದಿಯು ಕ್ರಯದ ಕರಾರು ಪತ್ರದ ಆಧಾರದ ಮೇಲೆ ದಾವ ಹಾಕಿರುತ್ತಾರೆ. ದಾವಾ ಆಸ್ತಿಯ ಪಹಣಿಯು ಆ ಸಮಯದಲ್ಲಿ ಲಕ್ಷ್ಮಮ್ಮರವರ ಹೆಸರಿನಲ್ಲಿತ್ತು ಆದರೆ ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ಮನೆಯಿಂದ 1 ನೇ ಪ್ರತಿವಾದಿಯ ಮನೆ ಅರ್ಧ ಕಿ.ಮೀ ದೂರದಲ್ಲಿದೆ. ಈ ದಿನ ನನಗೆ ನ್ಯಾಯಾಲಯಕ್ಕೆ ಬರಲು ವಾದಿಯ ಮಗನು ತಿಳಿಸಿರುತ್ತಾರೆ. ನಿನ್ನೆಯ ದಿನ ನಾರಾಯಣಪ್ಪನವರು ಸಾಕ್ಷ್ಯ ಹೇಳುವಂತೆ ನನ್ನ ಮನಗೆ ಬಂದು ತಿಳಿಸಿದ್ದರು.

1 ನೇ ಪ್ರತಿವಾದಿಯು ನಮಗೆ ಕ್ರಯದ ಕರಾರುಪತ್ರಕ್ಕೆ ಸಹಿ ಹಾಕಲು ಕರೆದಿದ್ದರು. ಪತ್ರವನ್ನು ಶ್ರೀನಿವಾಸಪುರ ತಾಲ್ಲೂಕು ಕಛೇರಿಯ ಬಳಿ ಬರೆದಿದ್ದರು. ನಾನು ಹೋಗುವಾಗ ಬೆಳಿಗ್ಗೆ 10.30 ಸಮಯ ಆಗಿತ್ತು. ಪತ್ರ ತಯಾರಿಸುವಾಗ ನಾವು ಇಬ್ಬರು ಸಾಕ್ಷಿದಾರರು 3 ಜನ ಪ್ರತಿವಾದಿಗಳು ಇದ್ದೆವು. ಛಾಪಾ ಕಾಗದವನ್ನು ಬ್ಯಾಂಕಿನಿಂದ ತಂದಿದ್ದು ಅದು 30 ಹೆಜ್ಜೆಗಳ ದೂರದಲ್ಲಿದೆ. ಛಾಪಾ ಕಾಗದವನ್ನು 1 ನೇ ಪ್ರತಿವಾದಿಯೇ ತಂದಿದ್ದರು. ಲಕ್ಷ್ಮಮ್ಮರವರು ತನಗಾಗಿ ಮತ್ತು ತನ್ನ ಮೊಮ್ಮಗಳಾದ ವೀಣಾರವರ ಪರವಾಗಿ ಸಹಿ ಮಾಡಿದರು. ಸಾಕ್ಷಿಯು ಮುಂದುವರೆದು ಸಹಿ ಮಾಡಿಲ್ಲ ಹೆಬ್ಬೆಟ್ಟಿನ ಗುರ್ತನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ.

ನಾನು ದ್ವಿತೀಯ ಪಿ ಯು ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಿಪಿ-1 ಕ್ಕೆ ನಾನು ಕೇವಲ ಸಹಿಯಷ್ಟೇ ಮಾಡಿರುತ್ತೇನೆ. ನಿಪಿ-1 ರಂತೆ ಪ್ರತಿವಾದಿಯರು ಯಾವುದೇ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯೊಂದಿಗೆ ಸೇರಿಕೊಂಡು ನಿಪಿ-1 ರಂತೆ ಸುಳ್ಳು ಕರಾರು ಪತ್ರ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯೊಂದಿಗೆ ನನಗೆ ಒಳ್ಳೆಯ ಆತ್ಮೀಯತೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು

ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ತಯಾರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲಾ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

(ಕರ್ನ ಸಿಂಗ್ ಆರ್.ಯು)
**C/c ಅಪರ ಸಿವಿಲ್ ನ್ಯಾಯಾಧೀಶರು**
**ಶ್ರೀನಿವಾಸಪುರ**